


### ಸರ್ಕಾರಿ ಶಾಲೆಗಳೇ ಉತ್ತಮ

ಸುಧಾ ಫೆ.3ರ ಸಂಚಿಕೆಯ 'ವಸತಿ ಶಾಲೆ ಎಲ್ಲಿ... ಹೇಗೆ?' ಗಣೇಶ ಚಂದನಶಿವರ ಮುಖ ಪುಟ ಲೇಖನ ಮಾಹಿತಿ ಪೂರ್ಣವಾಗಿತ್ತು. ಇಂದಿನ ಹಲವು ಪಾಲಕರಲ್ಲಿ ಕೇವಲ ಖಾಸಗಿ ಶಿಕ್ಷಣ ಸಂಸ್ಥೆಗಳು ಮಾತ್ರ ಒಳ್ಳೆಯ ಶಿಕ್ಷಣ ನೀಡುತ್ತಿವೆ ಸರ್ಕಾರ ನಡೆಸುವ ವಸತಿ ಶಾಲೆಗಳು ಉತ್ತಮವಾಗಿಲ್ಲ ಎಂಬ ಅಭಿಪ್ರಾಯವಿದೆ. ಇದಕ್ಕೆ ಉತ್ತರ ಎಂಬಂತೆ ಈ ಲೇಖನ ಮೂಡಿಬಂದಿದೆ. ಸರ್ಕಾರಿ ಶಾಲೆಗಳು ಅತ್ಯುತ್ತಮ ಎಂದು ನೀವು ಅನುಮೋದಿಸಿದ್ದಕ್ಕೆ ನಾವು ಕೃತಜ್ಞರು.

-ಚಂದ್ರಶೇಖರ ಹಿರೇಮಠ, ವಿಜಾಪುರ/ ಕೆ.ಶ್ಯಾಮಲಾ, ವಿಟ್ಲ/ ಪಿ.ಗೋವಿಂದರಾಜ್, ತುಮಕೂರು/ ಸು.ವಿಜಯಲಕ್ಷ್ಮಿ, ಶಿವಮೊಗ್ಗ

### ವೈಭವೀಕರಣ

ವಸತಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ನೀಡುವ ಊಟದ ಗುಣಮಟ್ಟ, ವ್ಯವಸ್ಥೆಯನ್ನು ವೈಭವೀಕರಿಸಿದ್ದಾರೆ.

-ಮೊಳಕಾಲ್ಮುರು ಸುರೇಶ, ಬಳ್ಳಾರಿ

### ಸಹಜ ಬಾಲ್ಯದಿಂದ ವಂಚಿತರು

ವಸತಿ ಶಾಲೆಯಲ್ಲಿ ಕಲಿತ ಮಕ್ಕಳು ಶೈಕ್ಷಣಿಕವಾಗಿ ಎತ್ತರಕ್ಕೆ ಬೆಳೆಯುತ್ತಾರೆ. ಸ್ವಾವಲಂಬನೆ, ಸಹಕಾರವನ್ನೂ ಕಲಿಯುತ್ತಾರೆ, ನಿಜ. ಆದರೆ ತಂದೆ-ತಾಯಿಯೊಂದಿಗೆ ಕಳೆಯುವ ಬಾಲ್ಯ ಜೀವನದಿಂದ ವಂಚಿತರಾಗುತ್ತಾರೆ.

-ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ

### ವಸತಿ ಶಾಲೆ: ಒಂದು ಅನುಭವ!

ಎರಡು ದಶಕಗಳಿಗೂ ಹಿಂದೆ ನನ್ನ ಕೊನೆ ಮಗಳು (ಇದೀಗ ವೈದ್ಯೆ) ಹಠ ಹಿಡಿದು, ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ದೊಡ್ಡಬಳ್ಳಾಪುರದ ನವೋದಯ ಶಾಲೆಗೆ ಪ್ರವೇಶ ಪಡೆದುಕೊಂಡಳು.

ಮೊದಲ ವಾರಕ್ಕೆ ಸೊರಗಿದಳು, ಎರಡನೇ ವಾರದಲ್ಲಿ ಕಜ್ಜಿ, ಮೂರನೇ ವಾರದಲ್ಲಿ ಹೇನನ್ನು 'ಕಾಣಿಕೆ'ಯಾಗಿ ಪಡೆದಳು. ನಾಲ್ಕನೇ ವಾರ ಅವಳನ್ನು ನೋಡಲು ಹೋದಾಗ ಇಲ್ಲಿರುವುದಿಲ್ಲ ಎಂದು ಹೇಳಿ ನಮ್ಮ ವಾಹನದಲ್ಲಿ ಬಂದು ಕುಳಿತಳು.

ಟಿ.ಸಿ. ಕೊಡುವುದಿಲ್ಲ ಎಂದು ಹೇಳಿದ ಪ್ರಾಂಶುಪಾಲರು ಅವಳು ವಾಹನದಲ್ಲಿ ಅಡಗಿ ಕೂಂಡಿರುವುದನ್ನು ಕಂಡ ಬಳಿಕ ಮನಸ್ಸು ಬದಲಿಸಿ ಟಿ.ಸಿ.ಯನ್ನು ಕೊಟ್ಟರು. ಈಗ ಈ ಶಾಲೆಗಳ ಪರಿಸ್ಥಿತಿ ಬದಲಾಗಿದ್ದರೆ ವಿದ್ಯಾರ್ಥಿಗಳು ಧನ್ಯರು!

-ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

### ಸಮಯೋಚಿತ ಬರಹ

ಕೆ.ಅಶೋಕರ ಆದಾಯ ತೆರಿಗೆ ಉಳಿಸುವುದು ಹೇಗೆ? ಸಮಯೋಚಿತ. ಮಾರ್ಚ್ ಕೊನೆಯಲ್ಲಿ ಯಾವುದಾದರೂ ಒಂದು ಕಂಪೆನಿಯ ಜೀವವಿಮಾ ಪಾಲಿಸಿಯನ್ನು ತೆಗೆದುಕೊಳ್ಳುವುದು ತಪ್ಪಬೇಕು.

-ಎಂ.ಎಲ್. ಲಕ್ಷ್ಮಣ್‌ರಾವ್, ದಾವಣಗೆರೆ

### ತಾಳ್ಮೆಯಿಂದ ಪರಿಹಾರ

'ಮಾನಸಿಕ ಉದ್ವಿಗ್ನತೆ; ಪರಿಹಾರ ಏನು?' ಚಂದ್ರಕುಮಾರ ಸಣ್ಣಮರಡಿ ಸೂಚಿಸಿರುವಂತೆ ತಾಳ್ಮೆಯಿಂದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಾದಂತಹ ಅವಶ್ಯಕತೆ ಇಂದು ಅನಿವಾರ್ಯವಾಗಿದೆ.

-ವಿಭಾ ಮುರಳೀಧರ್, ತುಮಕೂರು/ ಎಚ್.ಆನಂದಕುಮಾರ್, ಚಿತ್ರದುರ್ಗ/ ಟಿ.ಎನ್.ಸರಸ್ವತಿ, ತಿಪಟೂರು

### ಅರ್ಥಪೂರ್ಣ ಚಿತ್ರ

ಮಹಿಳೆಗಿಂತ ಒಂದು ಈರುಳ್ಳಿ ತೂಕ ಹೆಚ್ಚಾದದ್ದು ಮಹಮ್ಮದ್ ಅವರ ಅರ್ಥಪೂರ್ಣ ವ್ಯಂಗ್ಯಚಿತ್ರ.

-ಮಲ್ಲಿಕಾರ್ಜುನ ಗಚ್ಚಿ, ಗೋಗಿ

### 'ಗಣಿ ನೆಲ' ಮನೋಜ್ಞ ಕಥೆ

ಬಳ್ಳಾರಿಯ ಗಣಿನೆಲ ಉಳ್ಳವರಿಗೆ ಕಡಲು, ಬಡವರಿಗೆ ಬರೀ ಒಡಲು ಆಗಿದ್ದನ್ನು ಶ್ರೀಧರ ರಾಯಸಂ ಕಥೆ 'ಗಣಿ ನೆಲ' ಮನೋಜ್ಞವಾಗಿ ಚಿತ್ರಿಸಿದೆ.

ರಾಜಶೇಖರ ಗೌಡ, ಕೊಟ್ಟೂರು/ ಕೊಹಿಮ, ಬಸರಕೋಡು/ ಕೃಷ್ಣಮೂರ್ತಿ ಕಲುಮಂಗಿ, ನವದೆಹಲಿ

### ಉತ್ತಮ ಬರಹ

77ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಜಿ.ವೆಂಕಟಸುಬ್ಬಯ್ಯ ಅವರ ಬಗ್ಗೆ ರಘುನಾಥ ಚ.ಹ. ಲೇಖನ ಚೆನ್ನಾಗಿ ಮೂಡಿಬಂದಿದೆ.

-ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ/ ನೆ.ಲ.ರಾಂ, ಕೆ.ಆರ್.ವೆಂಕಟಸುಬ್ಬಾರಾವ್, ಬೆಂಗಳೂರು/ ಎಂ.ಸರ್ದಾರ್, ಅರಸೀಕೆರೆ

### ಗೊಂಬೆಯಾಟ ಮೂಲೆ ಗುಂಪು

'ಬೊಂಬೆಯಾಟವಯ್ಯಾ' (ಸುಶೀಲಾ ಡೋಣೂರ) ಓದಿದಾಗ ನನ್ನ ನೆನಪು 30 ವರ್ಷಗಳ ಹಿಂದಕ್ಕೆ ಹೋಯಿತು. ಇಂದು ಈ ವಿಶಿಷ್ಟ ಕಲೆ ಮೂಲೆ ಗುಂಪಾಗಿರುವುದು ಅಷ್ಟೇ ಬೇಸರದ ಸಂಗತಿ!

-ಬಿ.ಎಸ್. ರಮೇಶ್, ಬೆಂಗಳೂರು/ ಬಿ.ಎಸ್.ಮುಳ್ಳೂರ, ಹಲಗತ್ತಿ

### ಔಚಿತ್ಯಪೂರ್ಣ ಲೇಖನ

ಛಾಯಾಗ್ರಾಹಕ ರಾಮಚಂದ್ರರ ಬಗ್ಗೆ ಗಿರೀಶ್ ಕಾಸರವಳ್ಳಿಯವರ ಲೇಖನ ಔಚಿತ್ಯಪೂರ್ಣವಾಗಿತ್ತು. ಒಂದು ಸಿನಿಮಾ ಎಂದರೆ ಅದರ ಕಥೆಯ ಬಗ್ಗೆಯೂ, ಅದರಲ್ಲಿರುವ ಅಸಂಬದ್ಧ ದೃಶ್ಯ, ಸಂಭಾಷಣೆಗಳ ಬಗ್ಗೆ ಮಾತ್ರವೇ ತಲೆಕೆಡಿಸಿಕೊಳ್ಳುವ ನಮ್ಮಂತಹವರಿಗೆ ಛಾಯಾಗ್ರಹಣದ ವಿವೇಚನೆ, ಜಾಣ್ಮೆ ಕಡೆ ಗಮನ ಕಡಿಮೆ. ಈ ಲೇಖನದ ಮೂಲಕ ನಾವು ಎಂತಹ ಉತ್ತಮ ಛಾಯಾಗ್ರಾಹಕರನ್ನು ಕಳೆದುಕೊಂಡಿದ್ದೇವೆ ಎಂದು ತಿಳಿಯಿತು.

-ಶ್ಯಾಮಲಾ, ಹೋ.ನ., ಬೆಂಗಳೂರು

### ಚಿತ್ರ ಬೇಕಿತ್ತು

'ಪುಷ್ಪಗಿರಿಯ ಹಸಿರಿನಲ್ಲಿ' ಎಸ್.ಎಂ.ಜಂಬುಕೇಶ್ವರರ ಲೇಖನ ಹಾಗೂ ಭಾವಚಿತ್ರಗಳು ರಂಜಿಸಿದವು. ಇದರೊಂದಿಗೆ ರಾಜಾಸೀಟಿನ ಸೂರ್ಯಾಸ್ತ ದೃಶ್ಯದ ಚಿತ್ರವೂ ಇದ್ದಿದ್ದರೆ ಚೆನ್ನಾಗಿತ್ತು.

-ತರಂಗಿಣಿ. ತುಮಕೂರು/ ಆರ್.ರವೀಂದ್ರ, ಚಳ್ಳಕೆರೆ/ ಕೆ.ಜಗದೀಶ, ಬಳ್ಳಾರಿ

